
## ವಾಗೀಶ್ವರೀ ಶಿವರಾಮ ಅವರ ಹೊಸ ಕೃತಿ

# ‘೧೦೮ ಅಮೃತಬಿಂದು ಕಥಾಮಾಲಾ’

ಹಲವು ಬಗೆಯ ನೈತಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಥೆಗಳನ್ನು ಸಂಗ್ರಹಿಸಿ, ಅವುಗಳನ್ನು ಹೊಸ ರೀತಿಯಲ್ಲಿ ಪ್ರಸ್ತುತಪಡಿಸುವ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ, ಡಾ.ವಾಗೀಶ್ವರೀ ಶಿವರಾಮ ಅವರು. ಈ ಗ್ರಂಥಗಳ ಮಾಲೆಗೆ ಹೊಸ ಸೇರ್ಪಡೆಯೇ, ‘**೧೦೮ ಅಮೃತಬಿಂದು ಕಥಾಮಾಲಾ**’ ಪುಸ್ತಕ. ಶೀರ್ಷಿಕೆಯೇ ಸೂಚಿಸುವಂತೆ, ಈ ಪುಸ್ತಕದಲ್ಲಿ ೧೦೮ ಕಥೆಗಳಿವೆ. ಪುಸ್ತಕದ ‘ಅನುಕ್ರಮ’ದಲ್ಲಿ ತಿಳಿಸಿರುವಂತೆ, ಮೊದಲ ಭಾಗದಲ್ಲಿ ‘**ರಾಮಾಯಣ, ಮಹಾಭಾರತ, ಪುರಾಣ – ಐತಿಹಾಸಿಕ ಕಥೆಗಳು**’ ಬರುತ್ತವೆ. ಈ ಭಾಗದಲ್ಲಿ ಬರುವ ಕೆಲವು ಕಥೆಗಳು ಹೀಗಿವೆ: ಭೀಮನ ಕೃಷ್ಣಭಕ್ತಿ, ದ್ರೌಪದಿಗೆ ಶ್ರೀಕೃಷ್ಣ ಹೇಳಿದ ಹಿತನುಡಿ, ಬುದ್ಧನ ಕೈಯಲ್ಲಿದ್ದ ಕಮಲ, ಕಾಮುಕನಾದ ನಹುಷ – ಇತ್ಯಾದಿ. ಒಟ್ಟು ೨೫ ಕಥೆಗಳು ಈ ಭಾಗದಲ್ಲಿವೆ.




ಎರಡನೇ ಭಾಗದಲ್ಲಿವೆ, ‘**ಕೌಟುಂಬಿಕ ಪರಿಸರದ ಅಮೃತಬಿಂದು ಕಥೆಗಳು**’. ಈ ಭಾಗದಲ್ಲಿ ಒಟ್ಟು ೧೪ ಕಥೆಗಳಿವೆ. ದೈನಂದಿನ ಬದುಕಿನಲ್ಲಿ ನಾವೇ ಕಾಣುವ ಅನೇಕ ಘಟನೆಗಳಲ್ಲಿ ಕಂಡುಬರುವ ಸ್ವಾರಸ್ಯಕರವಾದ ಚಿತ್ರಗಳು ಇಲ್ಲಿವೆ. ಪೌರಾಣಿಕ, ಐತಿಹಾಸಿಕ ಕಥೆಗಳ ಒಂದು ರಮ್ಯ ಮೆರಗು ಇಲ್ಲಿ ಕಾಣಲಾಗದು; ಆದರೆ ಇಲ್ಲಿ ವಾಸ್ತವತೆ, ಸಹಜತೆಯಿದೆ. ಬದುಕಿಗಾಗಿ ಹತ್ತಿರವಾದ ಅನೇಕ ಸಂಗತಿಗಳಿವೆ. ನೈತಿಕ ಮೌಲ್ಯಗಳಿಂದ ತುಂಬಿರುವ ಈ ಕಥೆಗಳು ಹಲವು ಬಾರಿ ‘ನಮ್ಮ ಕಥೆಗಳೇ’ ಅನ್ನಿಸುತ್ತವೆ. ಮೂರನೇ ಭಾಗದಲ್ಲಿ ‘**ಸಾಮಾಜಿಕ ಪರಿಸರದ ಅಮೃತಬಿಂದು ಕಥೆಗಳು**’– ಇಲ್ಲಿ ೩೬ ಕಥೆಗಳಿವೆ. ಎರಡನೇ ಭಾಗಕ್ಕಿಂತ ಇವು ಯಾವ ರೀತಿಯಲ್ಲಿ ಭಿನ್ನವೆಂದರೆ, ಅಲ್ಲಿ ಒಂದು ಮನೆ–ಕುಟುಂಬ – ಹೀಗೆ ಸೀಮಿತ ಸನ್ನಿವೇಶವಿದ್ದರೆ, ಇಲ್ಲಿ ಸಮಾಜದ ವಿಭಿನ್ನ ನೆಲೆಯ, ವಿವಿಧ ಕಾರ್ಯಕ್ಷೇತ್ರಗಳ ಕಥೆಗಳಿವೆ. ಗುರು–ಶಿಷ್ಯರ ಕಥೆಗಳು, ‘ಪರ್ಷಿಯಾ ದೇಶದ ಸಂತ’ ‘ಮಾಸ್ತಿ ಕನ್ನಡದ ಆಸ್ತಿ’, ‘ಮೆಟ್ಟಿಲನ್ನು ಮರೆತ ಶಿಲಾಬಾಲಿಕೆ’ — ಮುಂತಾದ ವೈವಿಧ್ಯಪೂರ್ಣ ಕಥೆಗಳಿವೆ.

ನಾಲ್ಕನೇ ಭಾಗದಲ್ಲಿ ೩೩ ಕಥೆಗಳಿವೆ. ಇವು ‘**ಆಧ್ಯಾತ್ಮಿಕ ತತ್ತ್ವಗಳಿಂದ ಕೂಡಿದ ಕಥೆಗಳು**’. ಗುರುಭಕ್ತಿ, ಕೃಷ್ಣನ ಕಥೆ, ರವಿದಾಸನಂತಹ ಸಂತರ ಕಥೆ, ‘ಕಪ್’ ಹೇಳಿದ ಆತ್ಮಕಥೆ — ಹೀಗೆ ಅತ್ಯಂತ ರೋಚಕವಾದ ಕಥೆಗಳು ಇಲ್ಲಿ ಸೇರಿವೆ. ಈ ನಾಲ್ಕೂ ವಿಭಾಗಗಳಲ್ಲಿ ಹಲವು ಕಥೆಗಳು ಇತರ ಭಾಗಗಳಲ್ಲಿ ಸೇರ್ಪಡೆಯಾಗಬಹುದಲ್ಲವೇ ಎಂಬ ಭಾವನೆಯನ್ನು ಮೂಡಿಸಲೂಬಹುದು. ಆದರೆ ಲೇಖಕರು ಮಾಡಿಕೊಂಡಿರುವ ಈ ವಿಭಾಗಗಳು ಕಥೆಗಳ ಭಾವವನ್ನು ಅವಲಂಬಿಸಿ; ಆದ್ದರಿಂದ ಕೆಲವು ಕಥೆಗಳು ಇಲ್ಲೂ ಸಲ್ಲುತ್ತವೆ; ಅಲ್ಲೂ ಸಲ್ಲುತ್ತವೆ. ಇದು ಸಾಮಾನ್ಯ.

ಕೃತಿ: ೧೦೮ ಅಮೃತಬಿಂದು–ಕಥಾಮಾಲಾ
ಲೇಖಕರು : ಡಾ. ವಾಗೀಶ್ವರೀ ಶಿವರಾಮ
ಪ್ರಕಾಶನ : ವಾಗೀಶ್ವರೀ ಪ್ರಕಾಶನ, ಕಾವೂರು, ಮಂಗಳೂರು 575 015
ಪುಟ: 206 ಬೆಲೆ : 160
ಫೋನ್: 0824–3553922
ಮೊ: 9986200736

ಲೇಖಕರು ಕಥೆಗಳನ್ನು ಹೇಳುವ ಶೈಲಿಯನ್ನು ಕುರಿತು ಒಂದು ಮಾತು. ಕಥೆ ಎಂತಹುದೇ ಆಗಿರಲಿ, ಅದನ್ನು ಮನಮುಟ್ಟುವಂತೆ ಹೇಳುವುದರಲ್ಲೇ ಸ್ವಾರಸ್ಯವಿದೆ. ಶ್ರೀಮಾನ್ ವಾಗೀಶ್ವರೀ ಶಿವರಾಮ್ ಅವರು ಮಕ್ಕಳ ಮುಂದೆ ರಂಜಕವಾಗಿ ಕಥೆಯನ್ನು ಅಭಿನಯ ಪೂರ್ವಕವಾಗಿ ವಿವರಿಸಿ ಹೇಳಬಲ್ಲರು. ಪುಸ್ತಕಗಳಲ್ಲೂ ಅಷ್ಟೇ ಸ್ವಾರಸ್ಯಕರವಾಗಿ ನಿರೂಪಿಸಬಲ್ಲರು. ನಡುನಡುವೆ ಮುಖ್ಯವಾದ ಮಾತುಗಳಿಗೆ, ವಾಕ್ಯಗಳಿಗೆ ಒತ್ತು ನೀಡಿ ಮುದ್ರಿಸಿರುವುದು ಗಮನ ಸೆಳೆಯುವಂತಿದೆ. ಕಥೆಗಳ ಕೊನೆಯಲ್ಲಿ ಸುಭಾಷಿತಗಳನ್ನು ನೀಡಿ ವಿವರಿಸಿರುವುದು ಆಯಾ ಕಥೆಗಳು ನೀಡುವ ಸಂದೇಶವನ್ನು ಇನ್ನಷ್ಟು ಸ್ಪಷ್ಟಗೊಳಿಸುವಂತಿದೆ. ಈ ಕಥೆಗಳನ್ನು ಓದುವಾಗ, ಓದುಗನು ಈ ಕಥೆಗಳನ್ನು ಭಾವಿಸಿಕೊಳ್ಳಲು ಅನುಕೂಲವಾಗುವಂತೆ ಕೆಲವು ರೇಖಾಚಿತ್ರಗಳನ್ನು ನೀಡಿದ್ದರೆ, ಪುಸ್ತಕದ ಅಂದ ಹಾಗೂ ಓದುಗರ ಭಾವನೆಗೆ ಹೆಚ್ಚು ಅನುಕೂಲವಾಗುತ್ತಿತ್ತು ಅನ್ನಿಸುತ್ತದೆ. ಲೇಖಕರು ಇದರ ಎರಡನೇ ಮುದ್ರಣ ಮಾಡುವಾಗ ಈ ವಿಷಯಕ್ಕೆ ಗಮನ ಹರಿಸಬಹುದು. ‘ಕೊರೊನಾ’ ಸಂದರ್ಭದ ಏಕಾಂತವಾಸದ ಅವಧಿಗೆ ಒಳ್ಳೆಯ ಓದಿಗೆ ಒಳ್ಳೆಯ ಪುಸ್ತಕಗಳ ಅಗತ್ಯವಿದೆ. ಈ ಪುಸ್ತಕವು ಅಂತಹ ಓದಿಗೆ ಸಂಗ್ರಹಕ್ಕೆ ಒಳ್ಳೆಯ ಸೇರ್ಪಡೆಯಾಗಬಲ್ಲದು. ಆದಷ್ಟು ಮಂದಿ ಈ ಕೃತಿಯನ್ನು ಕೊಂಡುಕೊಂಡು ಓದಬೇಕೆಂಬುದು ನಮ್ಮ ಆಶಯ.